KATK010056102023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಸಂ.125/2023**

ಪ್ರಾ.ಸಾ. : **25**

ದೋ.ಸಾ. : **30**

ದಿ.**25.11.2025**

ಹೆಸರು : ಭೂಮೇಶ್ ನಾಯಕ್

ತಂದೆಯ ಹೆಸರು : ಪಾಪಣ್ಣ

ವಯಸ್ಸು : **47** ವರ್ಷ

ಉದ್ಯೋಗ : ಉಪ ತಹಸೀಲ್ದಾರ್, ಹೆಬ್ಬೂರು ಹೋಬಳಿ

ವಾಸಸ್ಥಳ : ತುಮಕೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

1. ದಿ.02.06.2019 ರಿಂದ ನಾನು ಹೆಬ್ಬೂರು ಹೋಬಳಿಯಲ್ಲಿ ಉಪ ತಹಸೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ಕ್ಯಾತ್ಸಂದ್ರ ವೃತ್ತದ ಪೋಲೀಸ್ ವೃತ್ತ ನಿರೀಕ್ಷಕರು ದಿ.24.03.2023 ರಂದು ಒಂದು ಪತ್ರವನ್ನು ಬರೆದು, ತುಮಕೂರು ತಾಲ್ಲೂಕು, ಹೆಬ್ಬೂರು ಹೋಬಳಿ ಬನ್ನಿಮರದ ಕಟ್ಟೆಯ ಬಸವರಾಜು ಬಿನ್ ಲೇಟ್ ಮುನಿಸ್ವಾಮಯ್ಯನವರ ಮಾಲೀಕತ್ವದ ನಾಗರಾಜು ಎಂಬುವವರು ಬಾಡಿಗೆಗೆ ಇರುವ ತಾಂಡೇಶ್ವರ ವುಡ್ ವರ್ಕ್ ನ ಖಾತಾ extract ಅನ್ನು ಕೇಳಿದ್ದರು. ದಿ.06.04.2023 ರಂದು ತಾಂಡವೇಶ್ವರ ವುಡ್ ವರ್ಕ್ ಅಂಗಡಿ ಇರುವ ಸ್ಥಳವು ಕಲ್ಕೆರೆ ಗ್ರಾಮದ ಸ.ನಂ.108/1 ಕ್ಕೆ ಸಂಬಂಧಪಟ್ಟಂತೆ ಇದ್ದು, ಅವರ ಕೋರಿಕೆಯಂತೆ ದಿ.06.04.2023 ರಂದು ಪತ್ರವನ್ನು ಬರೆದು, ಆರ್.ಟಿ.ಸಿ ಮತ್ತು ಲೆಡ್ಜರ್

ಖಾತಾ ನಕಲನ್ನು ಕೊಟ್ಟಿರುತ್ತೇನೆ. ನನಗೆ ಕೊಟ್ಟಂತಹ ಪತ್ರವನ್ನು ನಿಶಾನೆ ಪಿ54 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ54(ಎ) ಎಂದು ಗುರುತಿಸಲಾಯಿತು. ನಾನು ಕೊಟ್ಟ ಪತ್ರವನ್ನು ನಿಶಾನೆ ಪಿ55 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ55(ಎ) ಎಂದು, ಆರ್.ಟಿ.ಸಿ. ಯನ್ನು ನಿಶಾನೆ ಪಿ56 ಎಂದು, ಲೆಡ್ಜರ್ ಖಾತಾ ನಕಲನ್ನು ನಿಶಾನೆ ಪಿ57 ಎಂದು ಗುರುತಿಸಲಾಯಿತು. ಸ.ನಂ.108/1 10 ಗುಂಟೆ ಬಸವರಾಜುರವರ ತಂದೆ ಮುನಿಸ್ವಾಮಯ್ಯ ಬಿನ್ ಸಿದ್ದಲಿಂಗಯ್ಯನವರ ಹೆಸರಿನಲ್ಲಿದೆ.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

**3.** ನಾನು ಪೋಲೀಸರು ಕೇಳಿದಂತೆ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಕೊಟ್ಟಂತಹ ದಾಖಲೆ ಈ ಪ್ರಕರಣಕ್ಕೆ ಸಂಬಂಧಪಟ್ಟ ಜಾಗದ ದಾಖಲೆ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು